ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

# ಬದುಕಿನ ದಿವ್ಯತೆಗೆ ಜೀವನ ಪ್ರೀತಿಸಿ

– ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು

**ಸುತ್ತೂರು, ಮೇ–10:** ಜೀವನವನ್ನು ಪ್ರೀತಿಸುತ್ತಾ, ಅನುಭವಿಸುತ್ತಾ ಸಾಗಿದಾಗ ಮಾತ್ರ, ಬದುಕು ದಿವ್ಯವಾಗುತ್ತದೆ ಎಂದು ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ನುಡಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿಕ್ಷಕರಿಗಾಗಿ ಆಯೋಜಿಸಿರುವ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಪ್ರವಚನ ನೀಡುತ್ತಿದ್ದ ಅವರು, ಹೂವು, ಹಣ್ಣು, ಕಾಯಿ, ಎಲೆ, ಬಳ್ಳಿ, ಹಕ್ಕಿ, ಪಕ್ಷಿ, ಸೂರ್ಯ, ನಕ್ಷತ್ರ, ಚಂದ್ರ ತುಂಬಿ ಹರಿಯುವ ಹಳ್ಳಕೊಳ್ಳಗಳಿಂದಾದ ಸುಂದರವಾದ ಸೃಷ್ಠಿಯನ್ನು ದಿನವಿಡಿ ಧ್ಯಾನಿಸಬೇಕು ಆಗ ನಮ್ಮ ಬದುಕು ಸತ್ಯಂ, ಶಿವಂ, ಸುಂದರಂ ಆಗಿರುತ್ತದೆ. ಬದುಕೆಂದರೆ ನಿರಾಸೆಯಿಂದ, ಹತಾಶೆಯಿಂದ ಬದುಕುವುದಲ್ಲ, ಅತ್ಯಂತ ಉತ್ಸಾಹದಿಂದ ಬದುಕಬೇಕು. ಜಗತ್ತನ್ನೆಲ್ಲಾ ಹಸಿರುಗೊಳಿಸುವ ಭೂಮಿ, ಬೆಳಗುವ ಸೂರ್ಯ–ಚಂದ್ರ ಎಂದಿಗೂ ಉತ್ಸಾಹ ಕಳೆದುಕೊಂಡವರಲ್ಲ. ಜಗತ್ತಿನಲ್ಲಿ ಏನೆಲ್ಲಾ ಇದೆ, ಎಲ್ಲವೂ ಅದ್ಭುತ, ನಾವು ನಡೆಯುವ ಭೂಮಿ, ಬಳಸುವ ನೀರು, ಉಸಿರಾಡುವ ಗಾಳಿ, ವಾತಾವರಣದಲ್ಲಿ ಇದೆ. ಆದರೆ ಪ್ರಕೃತಿ ಎಂದೂ ಪಾಪಿ–ಪುಣ್ಯವಂತರೆಂದು ಲೆಕ್ಕಿಸದೆ ಎಲ್ಲರಿಗೂ ಸಮಾನವಾಗಿ ನೀರು ಬೆಳಕು ನೀಡುತ್ತದೆ ಹಾಗೆಯೇ ಶಿಕ್ಷಕರಾದವರು ವಿದ್ಯಾರ್ಥಿಗಳನ್ನು ಕಾಣಬೇಕು ಎಂದು ನುಡಿದರು.

ಪ್ರೊ. ಕೆ. ಅನಂತರಾಮುರವರು, ಪರಿಪೂರ್ಣ ವ್ಯಕ್ತಿತ್ವ ಎಂದರೆ ಮಸ್ತಕದಲ್ಲಿ ಬುದ್ಧಿ–ವಿವೇಕ ಹೊಂದಿರುವ, ಮುಖದಲ್ಲಿ ಉತ್ಸಾಹ ಮಂದಹಾಸವುಳ್ಳ, ತುಟಿಯಿಂದ ಹಿತ–ಮಿತ–ಸತ್ಯವಚನ ನುಡಿಯುವ, ಹೃದಯದಲ್ಲಿ ದಯೆ–ಕರುಣೆ–ಅನುಕಂಪ ಹೊಂದಿರುವವನು, ತೋಳಿನಲ್ಲಿ ಬಾಹುಬಲಿ–ಮಹಾಬಲಶಾಲಿಯಾಗಿರುವವನು, ಆಹಾರವನ್ನು ಹಿತ–ಮಿತ–ವೃತ ಸ್ವೀಕರಿಸುವವನು, ಪಂಚೇಂದ್ರಿಯ ನಿಗ್ರಹವುಳ್ಳವನು ಅಲ್ಲದೆ, ಲೋಕಾನುಭವ ಸಂಪನ್ನನಾಗಿರುವ ವ್ಯಕ್ತಿಯೇ ಪರಿಪೂರ್ಣ ವ್ಯಕ್ತಿ. ಭಾರತೀಯ ಸಂಸ್ಕೃತಿ ಸನಾತನ ಸಂಸ್ಕೃತಿಯಾಗಿದ್ದು, ಆಸ್ತಿಕ ನೆಲೆಗಟ್ಟು, ಚತುರ್ವಿದ ಪುರುಷಾರ್ಥಗಳ ನೆಲೆಗಟ್ಟು, ಸಹನಶೀಲ, ಚಲನ ಶೀಲ, ತ್ಯಾಗಶೀಲ, ಸಮನ್ವಯ ಶೀಲ, ಮಾತೆಯರಿಗೆ ಗೌರವ ನೀಡುವ ಸರ್ವೇಜನ ಸುಖೀನೋಭವಂತು ಎನ್ನುವ ಕರ್ಮಯೋಗ, ಜ್ಞಾನಯೋಗ ಹಾಗೂ ಕೌಟುಂಬಿಕ ಜೀವನಕ್ಕೆ ಹೆಚ್ಚು ಮಹತ್ವ ನೀಡುವುದೇ ಭಾರತೀಯ ಸಂಸ್ಕೃತಿ ಎಂದು ಬಣ್ಣಿಸಿದರು.

ಜನಾಭಿವೃದ್ಧಿ ಪರಿಣತರು ಹಾಗೂ ಅಭಿವೃದ್ಧಿ ಯೋಜನೆಗಳ ಮಾರ್ಗದರ್ಶಕರಾದ ಡಾ. ಜಿ. ಅಚ್ಯುತ್‌ರಾವ್‌ರವರು, ಸಂವಹನ ಮಾಧ್ಯಮಕ್ಕೆ ಭಾಷೆ ಒಂದೇ ಅಲ್ಲ, ಸಮಗ್ರ ವ್ಯಕ್ತಿತ್ವವನ್ನೇ ಬಳಸಬೇಕಾಗುತ್ತದೆ, ಆಗ ಮಾತ್ರ ಶ್ರೋತೃಗಳ ಅಥವಾ ವಿದ್ಯಾರ್ಥಿಗಳ ಮೇಲೆ ನಾವು ಅಂದುಕೊಂಡಂತಹ ಪರಿಣಾಮ ಬೀರಲು ಸಾಧ್ಯ. ಸಂವಹನ ಕಲೆ ಎಲ್ಲರಿಗೂ ಸಿದ್ಧಿಸುವಂತಹದ್ದಲ್ಲ ಎಂದೇನೋ ಅಂದುಕೊಳ್ಳಬೇಕಾಗಿಲ್ಲ. ಶಿಕ್ಷಕರಾದವರು ಭಾಷಣ ಕಲೆಯ ಕೌಶಲಗಳನ್ನು ಅರಿತಿರಬೇಕು. ಪಾಠ ಮಾಡುವಾಗ ಬಳಸಬೇಕಾದ ಶಬ್ದಗಳು, ಭಾಷೆಯ ವೈಖರಿ, ಆಂಗಿಕ ಭಾಷೆ, ಧ್ವನಿ ಎಲ್ಲವನ್ನು ರೂಢಿಸಿಕೊಂಡರೆ ವಿದ್ಯಾರ್ಥಿಗಳ ಗಮನವನ್ನು ಸೆಳೆಯಲು ಸಾಧ್ಯ. ವಿದ್ಯಾರ್ಥಿಗಳ ವಯಸ್ಸಿಗೆ ಅನುಗುಣವಾಗಿ ಶಿಕ್ಷಕರು ಸಂವಹನ ವೈಖರಿಯನ್ನು ಅರಿತಿರಬೇಕು ಎಂದು ತಿಳಿಸಿದರು.

ಶ್ರೀ ವೀರೇಶ್ ಪಾಟೀಲ್‌ರವರು, ಮುಂದಿನ ಪೀಳಿಗೆಗೆ ಸಾಕ್ಷರ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಉಣಬಡಿಸುವ ಶಿಕ್ಷಕರಲ್ಲಿ ಕರ್ತವ್ಯದ ಅರಿವು, ವೃತ್ತಿ ಗೌರವ, ವೃತ್ತಿ ಬದ್ಧತೆ, ಸಮಯ ಪರಿಪಾಲನೆ, ಜ್ಞಾನದಾಹದಂತಹ ಅನುಪಮ ಗುಣಗಳನ್ನು ಅಳವಡಿಕೊಂಡರೆ ಮಾತ್ರ ರಾಷ್ಟ್ರ ರಕ್ಷಣೆ ಸಾಧ್ಯ. ಮಹಾತ್ಮರು, ಸಾಧಕರು, ತತ್ವಜ್ಞಾನಿಗಳು, ವಿಜ್ಞಾನಿಗಳು, ರಾಷ್ಟ್ರನಾಯಕರು, ಸಮಾಜ ಸೇವಕರುಗಳನ್ನು ಮುಖ್ಯವಾಹಿನಿಗೆ ತಂದವರು ಶಿಕ್ಷಕರು. ಶಿಕ್ಷಕರ ಹೆಸರಿನಲ್ಲಿ ದೇವಸ್ಥಾನ ಕಟ್ಟಿಸಿ ಪ್ರತಿ ವರ್ಷ ವೈಭವದಿಂದ ಜಾತ್ರೆ ಮಾಡುತ್ತಿದ್ದಾರೆ ಹಾಗೂ ಕಲಿಸಿದ ಗುರುವನ್ನು ಗೌರವಿಸುವುದಕ್ಕಾಗಿ ಅವರು ಕುಳಿತ ಸಾರೋಟನ್ನೆ ಎಳೆದೊಯ್ದು ಮೆರೆಸಿದ ಉದಾಹರಣೆಗಳು ನಮ್ಮ ಮುಂದೆ ಇವೆ. ಬರೆದ ಮಹಾಕಾವ್ಯವನ್ನು ಗುರುವಿನ ಪದತಲಕ್ಕೆ ಅರ್ಪಿಸಿದ ರಾಷ್ಟ್ರಕವಿ ಕುವೆಂಪುರವರೂ ಒಬ್ಬ ಶಿಕ್ಷಕರಾಗಿದ್ದರು. ಇಂತಹ ಸ್ಥಾನದಲ್ಲಿರುವ ಶಿಕ್ಷಕರು ತಮ್ಮ ವೃತ್ತಿಯನ್ನು ಕಲಿಸುವ ವಿಷಯವನ್ನು ಹಾಗೂ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಕಾಣುವಂತಾಗಬೇಕು ಎಂದು ತಿಳಿಸಿದರು.

ಬೆಳಗಿನ ಪ್ರಾರ್ಥನೆಯ ನಂತರ ಯೋಗ, ಧ್ಯಾನ ಪ್ರಾಣಾಯಾಮ ನಡೆಯಿತು. ಸಾಯಂಕಾಲ ಶಿಬಿರಾರ್ಥಿಗಳು ದೇಶಿಯ ಆಟಗಳಲ್ಲಿ ಬಹಳ ಉತ್ಸುಕತೆಯಿಂದ ಪಾಲ್ಗೊಂಡಿದ್ದರು ಹಾಗೂ ಸುತ್ತೂರು ಶ್ರೀಕ್ಷೇತ್ರ ದರ್ಶನ ಮಾಡಿ ಪ್ರಕೃತಿ ಸೌಂದರ್ಯವನ್ನು ನೋಡಿ ಪುಳಕಿತರಾದರು.




ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಶಿಕ್ಷಕರಿಗೆ ಆಯೋಜಿಸಿರುವ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರವಚನ ನೀಡುತ್ತಿರುವುದು.